ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ

ಇವರ ನ್ಯಾಯಾಲಯದಲ್ಲಿ.

<u>ಸಿ.ಸಿ. ನಂ.ಃ 1544/2022</u>

..............................................................................

CW 01
PW 01

ಹೆಸರು : ಭರತ ಮಿರಾಶಿ

ತಂದೆಯ ಹೆಸರು : ಶಿವಾನಂದ

ವಯಸ್ಸು : 34 ವರ್ಷ

ಉದ್ಯೋಗ : ಗೌಂಡಿ ಕೆಲಸ

ವಾಸಸ್ಥಳ : ತೇರಗಾಂವ, ತಾಃ ಹಳಿಯಾಳ.

ದಿನಾಂಕ 02-12-2024 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ</u>** ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ದಿನಾಂಕ 13-10-2022 ರಂದು ಬೆಳಗ್ಗೆ 08-30 ಕ್ಕೆ 2 ನೇ ಆರೋಪಿಯಾದ ಮಾರುತಿ ವಾಗ್ಮೋರೆ ಈತನು ಮತ್ತು ಚಾಸಾ 8 ರವರು ಬೈಕಿನಲ್ಲಿ ನಮ್ಮ ಮುಂದೆ ಹಾಗೂ ನಾನು ನನ್ನ ಬೈಕಿನಲ್ಲಿ ಅವರ ಹಿಂದೆ ಕೆಲಸಕ್ಕೆ ತೇರಗಾಂವದಿಂದ ಹಳಿಯಾಳ ಕಡೆಗೆ ಬರುತ್ತಿದ್ದೇವು. ಗುತ್ತಿಗೇರಿ ಹತ್ತಿರ ಇರುವ ಒಂದು ಗ್ಯಾರೇಜ್ ಹತ್ತಿರ ಕೆ ಎಸ್ ಆರ್ ಟಿ ಸಿ ಬಸ್ ಮತ್ತು 2 ನೇ ಆರೋಪಿಯ ಬೈಕ್ ಆಜು ಬಾಜು (ಸಮಾನ ಅಂತರದಲ್ಲಿ) ಹೊಗುತ್ತಿದ್ದವು. ಸದರಿ ಬಸ್ ಕೂಡಾ ತೇರಗಾಂವ ಕಡೆಯಿಂದ ಹಳಿಯಾಳ ಕಡೆಗೆ ಬರುತ್ತಿತ್ತು. ಸದರಿ ಬಸ್ ಹಳಿಯಾಳ ಕಡೆಗೆ ಬರುವಾಗ ರಸ್ತೆಯ ಎಡ ಬದಿಯಲ್ಲಿ ಎಡಗಡೆ ಇತ್ತು ಹಾಗೂ ಸದರಿ ಬಸ್ಸಿನ ಬಲಗಡೆ 2 ನೇ ಆರೋಪಿಯ ಬೈಕ ಇತ್ತು. ಆ ಸಮಯದಲ್ಲಿ ಬಸ್ಸಿನ ಚಾಲಕನು ಒಮ್ಮೆಲೇ ಸ್ವಲ್ಪ ಬಲಬದಿಗೆ ಬಂದಿದ್ದರಿಂದ 2 ನೇ ಆರೋಪಿಯ ಬಲಗೈ ಬಸ್ಸಿನ ಮುಂದಿನ ಬಲಬದಿಯ ಚಕ್ರದಲ್ಲಿ ಸಿಲುಕಿತು. ನಂತರ ಹಿಂದೆ ಇದ್ದ ನಾನು ನನ್ನ ಬೈಕ್ ಅನ್ನು ಎಡಬದಿಗೆ ಹಚ್ಚಿ ತುರ್ತು ವಾಹನವನ್ನು ಕರೆಯಿಸಿ 2 ನೇ ಆರೋಪಿಯನ್ನು ಸದರಿ ವಾಹನದ ಮೂಲಕ ಹಳಿಯಾಳ ಸರ್ಕಾರಿ ಆಸ್ಪತ್ರೆಗೆ ತಂದೆವು. ಅಲ್ಲಿಂದ ಹೆಚ್ಚಿನ ಚಿಕಿತ್ಸೆಗೆ ಆತನನ್ನು ಧಾರವಾಡ ಜಿಲ್ಲಾ ಆಸ್ಪತ್ರೆಗೆ ಕಳುಹಿಸಿಕೊಟ್ಟರು. ಬಸ್ಸಿನ ನಂಬರ ಕೆಎ-25-ಎಮ್-2380 ಆಗಿತ್ತು. ಸದರಿ ಬಸ್ಸ ಅನ್ನು ಈಗ

ನ್ಯಾಯಾಲಯದ ಮುಂದಿರುವ ಆರೋಪಿ ಚಲಾಯಿಸುತ್ತಿದ್ದನು. 2 ನೇ ಆರೋಪಿಯು ಚಲಾಯಿಸುತ್ತಿದ್ದ ಬೈಕಿನ ಸಂಖ್ಯೆ ಕೆಎ–65–ಎಚ್–0408 ಆಗಿತ್ತು. ಸದರಿ ಬೈಕಿನ ಹಿಂದೆ ಕುಳಿತಿದ್ದ ಚಾಸಾ 8 ರವರ ತಲೆಗೆ ಜಾಸ್ತಿ ಗಾಯ ಆಗಿತ್ತು.

ಸಾಕ್ಷಿಗೆ ಒಂದು ದಾಖಲೆ ತೋರಿಸಿ ಸಹಿ ಗುರುತಿಸಲು ಸೂಚಿಸಿದ್ದು ಸಾಕ್ಷಿ ಸದರಿ ದಾಖಲೆಯಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆ ದೂರು ಇದ್ದು ಅದನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1 ಎ ಎಂದು ಗುರುತಿಸಲಾಯಿತು. 2 ನೇ ಆರೋಪಿಯು ಯಾವುದೇ ತಪ್ಪು ಮಾಡಿಲ್ಲ. ಸದರಿ ಅಪಘಾತವು 1 ನೇ ಆರೋಪಿಯ ತಪ್ಪಿನಿಂದಲೇ ಆಗಿರುತ್ತದೆ.

**ಪಾಟೀ ಸವಾಲು :** 1 ನೇ ಆರೋಪಿ ಪರ ಶ್ರೀಮತಿ ಆರ್ ಎಮ್ ಸಿ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.